1346(1939) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾಪು ಹೋಬಳಿಯಲ್ಲಿ ಭೂ ಮಾಲೀಕರಿಗೆ ಸರ್ಕಾರದಿಂದ ನೀಡಬೇಕಾದ ಪರಿಹಾರದ ಹಣವೆಷ್ಟು ,

ಆ) ಈ ಹಣವನ್ನು 2007–08 ನೇ ಸಾಲಿನಲ್ಲಿ ಪೂರ್ಣವಾಗಿ ಬಿಡುಗಡೆ ಮಾಡಲಾಗುವುದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಕಾಪು ಹೋಬಳಿಗೆ ಸಂಬಂಧಿಸಿದಂತೆ ಭೂ ಮಾಲೀಕರಿಗೆ ಪರಿಹಾರ ನೀಡಲು ರೂ 14 70 ಲಕ್ಷಗಳೆಂದು ನಿಗದಿಪಡಿಸಲಾಗಿದೆ ಒಟ್ಟು 1321 ಜನ ಭೂ ಮಾಲೀಕರಿಗೆ ಪರಿಹಾರ ಪಾವತಿಸಲು ಬಾಕಿ ಇದೆ, ಪ್ರಸ್ತುತ ಮಾಜಿ ಭೂ ಮಾಲೀಕರಿಗೆ ಪರಿಹಾರ ಪಾವತಿಸಲು ರೂ 3,60,848 ಅನುದಾನ ಲಭ್ಯವಿರುತ್ತದೆ ಆದರೆ ಮಾಜಿ ಭೂ ಮಾಲೀಕರು ಪರಿಹಾರದ ಬಗ್ಗೆ ಜಮೀನುಗಳ ಬಗ್ಗೆ ಕ್ರಮ ಬದ್ಧವಾದ ದಸ್ತಾವೇಜುಗಳನ್ನೊಳಗೊಂಡ ಅರ್ಜಿಸಲ್ಲಿಸದಿರುವುದರಿಂದ ಪರಿಹಾರ ಪಾವತಿಸಲು ಸಾಧ್ಯವಾಗುವುದಿಲ್ಲ ಆದುದರಿಂದ ಈ ಸಾಲಿಗೆ ಅನುದಾನ ಬಿಡುಗಡೆಯ ಅಗತ್ಯವಿರುವುದಿಲ್ಲ

ಆ) ಪ್ರಸ್ತುತ ಅನುದಾನ ಲಭ್ಯವಿರುವುದರಿಂದ 2007–08 ನೇ ಸಾಲಿಗೆ ಹೆಚ್ಚಿಸಿ ಅನುದಾನ ಅಗತ್ಯವಿರುವುದಿಲ್ಲ

1347 (1645) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉಪ ನೋಂದಣಿ ಅಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸುವಾಗ ಅನುಸರಿಸುವ ನಿಯಮಗಳೇನು, ಎಷ್ಟು ಜನಸಂಖ್ಯೆಗೆ ಒಂದರಂತೆ ಈ ಕಛೇರಿಗಳನ್ನು ತೆರೆಯಲಾಗುವುದು,